


## ನೀರು, ಎಳನೀರು

ನನಗೆ ಜ್ವರ ಕಾಣಿಸಿಕೊಂಡಿತ್ತು. ಮಾತ್ರೆ ತೆಗೆದುಕೊಂಡೆ. ಜ್ವರ ಹೋದರೂ ಸುಸ್ತು ಕಡಿಮೆಯಾಗಲಿಲ್ಲ. ಚಿಕ್ಕಮ್ಮ ವೈದ್ಯರ ಬಳಿ ಕರೆದುಕೊಂಡು ಹೋದರು. ತಪಾಸಣೆಯ ಬಳಿಕ ವೈದ್ಯರು, 'ನಿರ್ಜಲೀಕರಣ ಆಗಿದೆ. ಹೆಚ್ಚು ನೀರು, ಎಳನೀರು ಕುಡಿಬೇಕು' ಅಂದರು. 'ಮಾತ್ರೆ ಬರ್ಕೊಡ್ತೀರಾ?' ಚಿಕ್ಕಮ್ಮ ಕೇಳಿದರು. ಒಂದೆರಡು ಮಾತ್ರೆ ಬರೆದುಕೊಟ್ಟ ವೈದ್ಯರು, 'ಚೆನ್ನಾಗಿ ನೀರು ಕುಡಿಬೇಕು ತಿಳೀತಾ?' ಅಂದರು. 'ವಾರದಿಂದ ಸುಸ್ತು ಕಡಿಮೆಯಾಗಿಲ್ಲ. ಏನಾದ್ರೂ ಪರೀಕ್ಷೆ ಮಾಡಿಸಬೇಕಾ ಹೇಗೆ?' ಚಿಕ್ಕಮ್ಮ ಮತ್ತೆ ಕೇಳಿದಳು. 'ಬೇಡ, ನೀರು, ಎಳನೀರು ಕುಡಿತಾ ಇರಲಿ, ಸಾಕು' ಅಂದರು. ಆಚೆ ಬಂದಾಗ ಬಿಲ್ಲಿಂಗ್ ಕೌಂಟರ್‌ನಲ್ಲಿ 300 ರೂಪಾಯಿ ಕನ್ಸಲ್ಟೇಶನ್ ಫೀ ಎಂದರು. ಚಿಕ್ಕಮ್ಮ, 'ನೂರೈವತ್ತು ತಗೊಳ್ಳಿ ಸಾಕು. ನಿಮ್ಮ ಡಾಕ್ಟ್ರು ನೀರು, ಎಳನೀರು ಕುಡಿಲಿ ಅನ್ನದು ಬಿಟ್ರೆ ಬೇರೇನೂ ಹೇಳಿಲ್ಲ' ಅಂದಳು.

**ಕಾವ್ಯಾ ಹಿರೇಮಠ**



## ಆಧಾರ-ಆಧಾರ್

ಈಚೆಗೊಂದು ದಿನ ಶಾಲಾ ಸ್ಟಾಫ್ ರೂಮಿನಲ್ಲಿ ಸಹೋದ್ಯೋಗಿಗಳೊಂದಿಗೆ ಕೂತಿದ್ದಾಗ, ಆಗಷ್ಟೇ ಕೊಟ್ಟೂರಿನ ಕಾರ್ತಿಕೋತ್ಸವ ಮುಗಿಸಿಕೊಂಡು ಬಂದಿದ್ದ ಮುಖ್ಯ ಗುರುಗಳು ಒಳಬಂದರು. 'ಮಹೇಶ್, ಟೇಬಲ್ ಮೇಲೆ ಕೋಟ್ರೇಶನ ಆಧಾರ್ ಇದೆ ತಗೋಳ್ಳಿ' ಎಂದರು. ನಾನು ಟೇಬಲ್ ಮೇಲೆ ಕೊಟ್ರೇಶ್ ಎಂಬ ವಿದ್ಯಾರ್ಥಿಯ ಆಧಾರ್ ಕಾರ್ಡನ್ನು ಹುಡುಕತೊಡಗಿದೆ. ಆದರೆ, ಯಾವುದೇ ಆಧಾರ್ ಕಾರ್ಡ್ ಅಲ್ಲಿ ಸಿಗದ ಕಾರಣ, 'ಸರ್, ಕೋಟ್ರೇಶನ ಆಧಾರ್ ಕಾರ್ಡ್ ಸಿಗ್ತಾ ಇಲ್ಲ' ಎಂದೆ. ಅದಕ್ಕವರು ನಗುತ್ತ, 'ಟೇಬಲ್ ಮೇಲೆ ಕೋಟ್ರೇಶ್ವರನ ಆಧಾರ (ಪ್ರಸಾದ) ಇದೆ ತಗೊಂಡು ಹಣೆಗೆ ಹಚ್ಚಿಕೊಳ್ಳಿ ಅಂತ ಹೇಳಿದೆ' ಎಂದು ಬಿಡಿಸಿ ಹೇಳಿದರು.

**ಮಹೇಶ್ವರ ಹುರುಕಡ್ಲಿ**